All India Radio: Bangalore
National Bulletin In Kannada
27.12.2025 19.35 p.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ರಾಷ್ಟ್ರಪತಿ ದ್ರೌಪದಿ ಮುರ್ಮು ಕಾರವಾರ ಐಎಎನ್ ಕದಂಬ ನೌಕಾ ನೆಲೆಗೆ ನಾಳೆ ಭೇಟಿ; ಸಬ್‌ಮೆರಿನ್‌ನಲ್ಲಿ ನೌಕೆಯಲ್ಲಿ ಯಾನ
- ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧಿವೇಶನ; ಕೇಂದ್ರ-ರಾಜ್ಯಗಳ ಸಹಭಾಗಿತ್ವದ ಬಲಪಡಿಸಲು ಆದ್ಯತೆ
- ಪ್ರಧಾನಿ ಅವರಿಂದ ಆಕಾಶವಾಣಿ ಮೂಲಕ ನಾಳೆ ಮನ್ ಕಿ ಬಾತ್
- ದೇಶದ ಉತ್ತರದ ಆರು ರಾಜ್ಯಗಳಲ್ಲಿ ಅತಿ ದಟ್ಟ ಮಂಜು; ಹವಾಮಾನ ಇಲಾಖೆಯಿಂದ ಕೆಂಪು ಎಚ್ಚರಿಕೆ

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಗೋವಾ, ಕರ್ನಾಟಕ ಮತ್ತು ಜಾರ್ಖಂಡ್‌ಗೆ ನಾಲ್ಕು ದಿನಗಳ ಭೇಟಿ ನೀಡಲಿದ್ದಾರೆ.

ಅವರು ಇಂದು ಸಂಜೆ ಗೋವಾಕ್ಕೆ ತೆರಳಲಿದ್ದಾರೆ. ನಾಳೆ ಕರ್ನಾಟಕದ ಕಾರವಾರದಲ್ಲಿರುವ ಐಎನ್‌ಎಸ್ ಕದಂಬ ನೌಕಾ ನೆಲೆಗೆ ಭೇಟಿ ನೀಡಲಿದ್ದಾರೆ. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲಿದ್ದಾರೆ. ನೌಕಾ ನೆಲೆ ಭೇಟಿ ನಂತರ ರಾಷ್ಟ್ರಪತಿ ಅವರು, ಕಾರವಾರ ನೌಕಾ ನೆಲೆಯಿಂದ ಜಲಾಂತರ್ಗಾಮಿ ನೌಕೆಯಲ್ಲಿ ಪ್ರಯಾಣಿಸಲಿದ್ದಾರೆ. ಈ ಮೂಲಕ ಅವರು, ಸಬ್‌ಮೆರಿನ್‌ನಲ್ಲಿ ಪ್ರಯಾಣಿಸಿದ ಎರಡನೇ ರಾಷ್ಟ್ರಪತಿ ಆಗಲಿದ್ದಾರೆ. ರಾಷ್ಟ್ರಪತಿ ಆಗಿದ್ದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು ೨೦೦೬ರಲ್ಲಿ ವಿಶಾಖಪಟ್ಟಣಂನಲ್ಲಿ ಸಬ್‌ಮೆರಿನ್‌ನಲ್ಲಿ ಪ್ರಯಾಣಿಸಿದ್ದರು.

ಬಳಿಕ ಇದೇ ೨೯ ರಂದು ಜಾರ್ಖಂಡ್‌ನ ಜಮ್‌ಶಡ್‌ಪುರದಲ್ಲಿ ನಡೆಯಲಿರುವ ಓಲ್ ಚಿಕಿ ಲಿಪಿಯ ಶತಮಾನೋತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ಅವರು ಭಾಗವಹಿಸಲಿದ್ದಾರೆ.

ಅದೇ ದಿನ, ಜಮ್‌ಶಡ್‌ಪುರದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ-ಎನ್‌ಐಟಿ ೧೫ನೇ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ೩೦ ರಂದು ಅವರು ದುಮ್ಲಾದಲ್ಲಿ ನಡೆಯುವ ಅಂತಾರಾಜ್ಯ ಜನಸಾಂಸ್ಕೃತಿಕ ಸಮಾಗಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಇಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ರಾಷ್ಟ್ರೀಯ ಅಧಿವೇಶನದ ಎರಡನೇ ದಿನದ ಕಲಾಪ ನಡೆಯಿತು. ಪ್ರಧಾನಿ ಅವರು, ನಾಳೆಯು ಈ ಅಧಿವೇಶನದ ನೇತೃತ್ವ ವಹಿಸಲಿದ್ದಾರೆ.

ನಿನ್ನೆ ಆರಂಭವಾದ ಮೂರು ದಿನಗಳ ಈ ಅಧಿವೇಶನ ರಾಷ್ಟ್ರೀಯ ಅಭಿವೃದ್ಧಿ ಆದ್ಯತೆಗಳ ಕುರಿತು ಕೇಂದ್ರ ಮತ್ತು ರಾಜ್ಯಗಳ ಸಹಭಾಗಿತ್ವ ಬಲಪಡಿಸುವ ಉದ್ದೇಶ ಹೊಂದಿದೆ.

ಈ ಸಮ್ಮೇಳನ, ಕೇಂದ್ರ ಮತ್ತು ರಾಜ್ಯಗಳು ಸಹಕರಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಅಲ್ಲದೇ, ಭಾರತದ ಮಾನವ ಬಂಡವಾಳ ಸಾಮರ್ಥ್ಯ ಹೆಚ್ಚಿಸಲು ಮತ್ತು ಸಮಗ್ರ ಬೆಳವಣಿಗೆಯನ್ನು ತ್ವರಿತಗೊಳಿಸಲು ಏಕೀಕೃತ ಮಾರ್ಗಸೂಚಿಯನ್ನು ವಿನ್ಯಾಸಗೊಳಿಸುತ್ತದೆ.

ಸಾಮಾನ್ಯ ಅಭಿವೃದ್ಧಿ ಕಾರ್ಯಸೂಚಿಯನ್ನು ಅಂತಿಮಗೊಳಿಸುವ ಗುರಿ ಹೊಂದಿರುವ ಚರ್ಚೆಗಳಿಗೆ ಸಮ್ಮೇಳನ ವೇದಿಕೆ ಒದಗಿಸಲಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅನುಸರಿಸಬೇಕಾದ ಉತ್ತಮ ಅಭ್ಯಾಸ ಮತ್ತು ತಂತ್ರಗಳನ್ನು ಒಳಗೊಂಡ "ವಿಕಸಿತ ಭಾರತಕ್ಕಾಗಿ ಮಾನವ ಬಂಡವಾಳ" ಎಂಬ ವಿಷಯದ ಕುರಿತು ಈ ಸಮ್ಮೇಳನ ಗಮನಹರಿಸುತ್ತದೆ.

ಬಾಲ್ಯದ ಶಿಕ್ಷಣ ಶಾಲಾ ಶಿಕ್ಷಣ, ಕೌಶಲ್ಯ, ಉನ್ನತ ಶಿಕ್ಷಣ ಮತ್ತು ಕ್ರೀಡೆ ಇತರ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆಯೂ ಈ ಸಮ್ಮೇಳನದಲ್ಲಿ ವಿಶೇಷವಾಗಿ ಚರ್ಚಿಸಲಾಗುತ್ತಿದೆ.

ಇದಲ್ಲದೇ, ಆಡಳಿತದಲ್ಲಿ ತಂತ್ರಜ್ಞಾನಕ್ಕೆ ಸದಾವಕಾಶ ಅಪಾಯ ಗುರುತಿಸುವಿಕೆ ಹಾಗೂ ತಗ್ಗಿಸುವಿಕೆ ಕೃಷಿಗೆ ಸಂಬಂಧಿಸಿದಂತೆ ದಕ್ಷ ಪೂರೈಕೆ ಸರಪಳಿ ಮಾರುಕಟ್ಟೆ ಸಂಪರ್ಕ ಒಂದು ರಾಜ್ಯ ಒಂದು ಪ್ರವಾಸಿ ತಾಣ, ಆತ್ಮನಿರ್ಭರ ಭಾರತ, ಮೊದಲಾದ ಆರು ಅಂಶಗಳ ಬಗ್ಗೆಯೂ ಅಧಿವೇಶನದಲ್ಲಿ ವಿಶೇಷ ಚರ್ಚೆಗಳು ನಡೆಯಲಿವೆ. ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಹಿರಿಯ ಅಧಿಕಾರಿಗಳು, ತಜ್ಞರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ.

***************

ಈಗ ವರ್ಷಾಂತ್ಯದ ಈ ಸಂದರ್ಭದಲ್ಲಿ ವರ್ಷದ ಪ್ರಮುಖ ಘಟನೆಯ ಒಂದು ಅವಲೋಕನ.

೧೯೩೦ರಲ್ಲಿ ಮಹಾತ್ಮಾಗಾಂಧಿ ಅವರು ಉಪ್ಪಿನ ಸತ್ಯಾಗ್ರಹ ನಡೆಸಿ, ತೆರಿಗೆ ನಾಗರಿಕರ ಜೀವನ ದುರ್ಬರಗೊಳಿಸಿದ್ದನ್ನು ಅನಾವರಣಗೊಳಿಸಿದರು. ವ್ಯಾಟ್ ಆಡಳಿತ ಸಮಯದಲ್ಲಿ ಪರೋಕ್ಷ ತೆರಿಗೆ ಭಾರೀ ಗೊಂದಲವನ್ನು ಸೃಷ್ಟಿಸಿತು. ೨೦೧೭ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತಂದ ಸರಕು ಮತ್ತು ಸೇವಾ ತೆರಿಗೆ ಐತಿಹಾಸಿಕ ಕ್ರಮವೆನಿಸಿತು. ಇದು ಭಾರತವನ್ನು ಒಂದೇ ಮಾರುಕಟ್ಟೆಯಾಗಿ ಏಕೀಕರಿಸಿತು, ಪಾರದರ್ಶಕ ಪರೋಕ್ಷ ತೆರಿಗೆ ಅಡಿಪಾಯ ಹಾಕಿತು. ವರ್ಗೀಕರಣದ ಸವಾಲುಗಳನ್ನು ಗುರುತಿಸಿದ ಸರ್ಕಾರ ೨೦೨೫ರಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳನ್ನು ತಂದಿತು. ವ್ಯವಸ್ಥೆಯನ್ನು ಶೇಕಡ ೫ ಮತ್ತು ೧೮ ಎಂಬ ಎರಡು ಸ್ಪಷ್ಟ ಹಂತಗಳಲ್ಲಿ ತರ್ಕಬದ್ಧಗೊಳಿಸಲಾಯಿತು. ಹಾಗೂ ವರ್ಗೀಕರಣ ಸ್ಪಷ್ಟಪಡಿಸಲಾಯಿತು. ಅನುಸರಣೆ ಸರಳಗೊಳಿಸಲಾಯಿತು ಮತ್ತು ನೋಂದಣಿಯನ್ನು ಸುಲಭಗೊಳಿಸಲಾಯಿತು.

ತೆರಿಗೆ ಸುಧಾರಣೆಯಿಂದಾಗಿ ಬಹು ವಲಯಗಳಲ್ಲಿ ನೇರ ಬೇಡಿಕೆ ಉತ್ತಮಗೊಂಡಿತು. ದೇಶ ೬.೦೫ ಟ್ರಿಲಿಯನ್‌ಷ್ಟು ಅತ್ಯಧಿಕ ದೀಪಾವಳಿ ಮಾರಾಟವನ್ನು ದಾಖಲಿಸಿದ್ದು, ಇದು ಹಿಂದಿನ ವರ್ಷಕ್ಕಿಂತ ಶೇಕಡ ೨೫ಕ್ಕಿಂತ ಹೆಚ್ಚಾಗಿದೆ. ಅಕ್ಟೋಬರ್‌ನಲ್ಲಿ ಆಟೋ ಮೊಬೈಲ್ ಚಿಲ್ಲರೆ ಮಾರಾಟ ಶೇಕಡ ೪೦.೫ ರಷ್ಟು ಏರಿಕೆಯಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿತು.

ಜಿಎಸ್‌ಟಿ ತೆರಿಗೆ ಆದಾಯ ಅಕ್ಟೋಬರ್-ನವೆಂಬರ್‌ನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇಕಡ ೨.೮ ರಷ್ಟು ಹೆಚ್ಚಾಗಿದೆ. ಇದಲ್ಲದೇ, ಆದಾಯಕರ ವಿನಾಯಿತಿಯಲ್ಲಿನ ಹೆಚ್ಚಳ ಪ್ರಮುಖ ಸುಧಾರಣೆ ಎನಿಸಿದೆ. ದೇಶದಲ್ಲಿ ತೆರಿಗೆ ವಿಧಿಸುವುದು ಇನ್ನು ಮುಂದೆ ನಿಯಂತ್ರಣದ ಸಾಧನವಲ್ಲ,

ಪಾಲುದಾರಿಕೆಯಾಗಿದೆ. ವ್ಯವಸ್ಥೆ ಸರಳವಾಗಿದ್ದಾಗ ಜನರಲ್ಲಿ ವಿಶ್ವಾಸ ಮೂಡುತ್ತದೆ. ಇದು ಆರ್ಥಿಕ ಬೆಳವಣಿಗೆಗೂ ಪೂರಕವಾಗಿದೆ.

***************

ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ ಅವರು, ದೇಶ ಮತ್ತು ವಿದೇಶಗಳ ಭಾರತೀಯರನ್ನುದ್ದೇಶಿಸಿ ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ.

ಇದು ಮನ್ ಕಿ ಬಾತ್‌ನ ೧೨೯ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮವು ಎಲ್ಲಾ ಆಕಾಶವಾಣಿ ಮತ್ತು ದೂರದರ್ಶನ ವಾಹಿನಿಗಳು, ಆಕಾಶವಾಣಿ ಸುದ್ದಿ ವೆಬ್‌ಸೈಟ್ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಪ್ರಸಾರವಾಗಲಿದೆ.

ಇದನ್ನು ಆಕಾಶವಾಣಿ ಜಾಲತಾಣ, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಚೇರಿ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿಯೂ ನೇರ ಪ್ರಸಾರವಾಗಲಿದೆ. ಹಿಂದಿ ಪ್ರಸಾರದ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮ ಭಿತ್ತರಗೊಳ್ಳಲಿದೆ.

***************

ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಇಂದು ೪೧ ದಿನಗಳ ಮಂಡಲ ವ್ರತದ ಅತ್ಯಂತ ಪವಿತ್ರ ಆಚರಣೆಯಾದ ಮಂಡಲ ಪೂಜೆ ನಡೆಯಿತು. ಬಂಗಾರದ ತಂಗ ಅಂಕಿ ಉಡುಪಿನಲ್ಲಿ ಅಲಂಕೃತಗೊಂಡ ಅಯ್ಯಪ್ಪ ಸ್ವಾಮಿ ದರ್ಶನವನ್ನು ಧಾರ್ಮಿಕ ಶ್ರದ್ಧಾಳುಗಳು ಪಡೆದರು.

೪೧ ದಿನಗಳ ಮಂಡಲ ಯಾತ್ರೆ ಅವಧಿಯ ಬಳಿಕ ಇಂದು ರಾತ್ರಿ ೧೧ ಗಂಟೆಗೆ ದೇವಸ್ಥಾನದ ಬಾಗಿಲುಗಳನ್ನು ಮುಚ್ಚಲಾಗುತ್ತಿದೆ ಎಂದು ಕೇರಳ ಪ್ರತಿನಿಧಿ ವರದಿ ಮಾಡಿದ್ದಾರೆ. ನಂತರ ಬರುವ ಮಂಗಳವಾರ ಸಂಜೆ ೫ ಗಂಟೆಗೆ ಮಕರ ವಿಳಕ್ಕು ಋತುವಿಗಾಗಿ ದೇವಾಸ್ಥಾನದ ದ್ವಾರಗಳನ್ನು ತೆರೆಯಲಾಗುವುದು. ಜನವರಿ ೧೪ ರಂದು ಮಕರ ವಿಳಕ್ಕು ಸಂಭ್ರಮಾಚರಣೆ ನಡೆಯಲಿದೆ.

***************

ಸಿಖ್ ಧರ್ಮದ ಖಾಲ್ಸಾ ಹಂತದ ಸಂಸ್ಥಾಪಕ ಶ್ರೀ ಗುರು ಗೋವಿಂದ್ ಸಿಂಗ್ ಜಿ ಮಹಾರಾಜ್ ಅವರ ೩೫೯ನೇ ಜಯಂತಿ ಸಂದರ್ಭದಲ್ಲಿ ಇಂದು ದೇಶಾದ್ಯಂತ ಗೌರವ ನಮನ ಸಲ್ಲಿಸಲಾಯಿತು.

ಪಾಟ್ನಾ ಹಾಗೂ ಅಮೃತಸರದ ತಕ್ತ ಶ್ರೀ ಹರ್‌ಮಂದಿರ್ ಸಾಹಿಬ್‌ಗಳಲ್ಲಿ ದೀಪ್‌ಮಾಲಾ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಇದಲ್ಲದೇ, ಶ್ರೀ ಗುರು ಗೋವಿಂದ್ ಸಿಂಗ್, ಅವರ ತಾಯಿ ಮತ್ತು ಮಕ್ಕಳ ತ್ಯಾಗ ಬಲಿದಾನಗಳನ್ನು ಸಂಸ್ಮರಿಸುವ ಜಾಥಾ ಕಾರ್ಯಕ್ರಮಗಳನ್ನು ಪಂಜಾಬ್ ರಾಜ್ಯಾದ್ಯಂತ ವಿವಿಧೆಡೆ ಹಮ್ಮಿಕೊಳ್ಳಲಾಗಿತ್ತು.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ಪ್ರಕಾಶ ಪರ್ವದ ಸಂದರ್ಭದಲ್ಲಿ ಇಂದು ಶ್ರೀ ಗುರು ಗೋವಿಂದ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದ್ದಾರೆ. ಗುರು ಗೋವಿಂದ್ ಸಿಂಗ್ ಜಿ ಅವರು ತೋರಿದ ವಿವೇಕ ಮತ್ತು ಧೈರ್ಯಗಳಿಗೆ ಇಡೀ ದೇಶ ಗೌರವದಿಂದ ತಲೆ ಬಾಗುತ್ತದೆ. ಸತ್ಯ, ನ್ಯಾಯಕ್ಕಾಗಿ ಅವರು ಮಾಡಿದ ಹೋರಾಟ ಮುಂದಿನ ಜನಾಂಗಕ್ಕೆ ಸ್ಫೂರ್ತಿಯಾಗಿದೆ. ಸಮಾನತೆ, ನಿಸ್ವಾರ್ಥ ಸೇವೆ, ಸಮಾಜ ಕಲ್ಯಾಣ ಕುರಿತಾದ ಅವರ ಉಪದೇಶಗಳು ಮಾರ್ಗದರ್ಶನ ನೀಡುತ್ತವೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

***************

ಮುಂದಿನ ಮೂರು ದಿನಗಳ ಕಾಲ ಬಿಹಾರ, ಹರಿಯಾಣ, ಚಂಡೀಗಢ, ದೆಹಲಿ, ಹಿಮಾಚಲ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಅತಿ ದಟ್ಟ ಮಂಜು ಕವಿದ ವಾತಾವರಣವಿರಲಿದ್ದು, ಹವಾಮಾನ ಇಲಾಖೆ ಕೆಂಪು ಎಚ್ಚರಿಕೆ ನೀಡಿದೆ.

ಈಶಾನ್ಯ ಭಾರತ ಒಡಿಶಾ, ಪಶ್ಚಿಮ ಬಂಗಾಳದ ಉಪ ಹಿಮಾಲಯ ಭಾಗ, ಸಿಕ್ಕಿಂ ಮತ್ತು ಉತ್ತರಾಖಂಡ್‌ನಲ್ಲಿ ಬರುವ ಗುರುವಾರದವರೆಗೆ ದಟ್ಟ ಮಂಜುಕವಿದ ವಾತಾವರಣ ಇರಲಿದೆ. ಜಾರ್ಖಂಡ್, ಉತ್ತರಪ್ರದೇಶ, ಬಿಹಾರ ಮತ್ತು ಉತ್ತರಾಖಂಡ್‌ಗಳಲ್ಲಿ ನಾಳೆ ಹಗಲು ಹೊತ್ತಿನಲ್ಲಿ ಶೀತದಿಂದ ಅತಿ ಶೀತ ವಾತಾವರಣ ಇರಲಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಈ ತಿಂಗಳಾಂತ್ಯದವರೆಗೆ ಗುಡುಗು ಸಿಡಿಲು ಒಳಗೊಂಡ ಬಲವಾದ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಮಧ್ಯೆ, ದೆಹಲಿ ಪ್ರದೇಶದಲ್ಲಿ ವಾಯು ಗುಣಮಟ್ಟ ಅತ್ಯಂತ ಕಡಿಮೆ ವರ್ಗದಲ್ಲಿದೆ. ರಾಜಧಾನಿಯಲ್ಲಿ ಮಧ್ಯಾಹ್ನದ ವೇಳೆಗೆ ಸರಾಸರಿ ವಾಯು ಗುಣಮಟ್ಟ ಸೂಚ್ಯಂಕ ೩೭೧ರಷ್ಟಿತ್ತು ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ಈ ಮಧ್ಯೆ, ದೇಶಾದ್ಯಂತ ದಟ್ಟ ಮಂಜು ಹಾಗೂ ಅಸ್ಪಷ್ಟ ಗೋಚರತೆ ಕಾರಣದಿಂದಾಗಿ ವಿವಿಧ ರೈಲುಗಳ ಸಂಚಾರದಲ್ಲಿ ವಿಳಂಬ ಉಂಟಾಗಿದೆ. ಪ್ರಯಾಣಿಕರು ಪರಿಷ್ಕೃತ  ರೈಲು ವೇಳಾಪಟ್ಟಿಯನ್ನು ಪರಿಶೀಲಿಸಿಕೊಳ್ಳುವಂತೆ ರೈಲ್ವೆ ಇಲಾಖೆ ಮನವಿ ಮಾಡಿದೆ.

***************

ಕೇಂದ್ರ ಗ್ರಾಹಕ ವ್ಯವಹಾರ ಖಾತೆಯ ಪ್ರಮುಖ ಉಪಕ್ರಮವಾದ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯ ನೆರವಿನಿಂದ ಈ ವರ್ಷ ಇದುವರೆಗೆ ಸುಮಾರು ೪೫ ಕೋಟಿ ರೂಪಾಯಿ ಹಣ ಮರುಪಾವತಿ ಮಾಡಲಾಗಿದೆ.

ಕಳೆದ ೮ ತಿಂಗಳಲ್ಲಿ ೬೭ ಸಾವಿರಕ್ಕೂ ಅಧಿಕ ಗ್ರಾಹಕ ಕುಂದುಕೊರತೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಇದರಲ್ಲಿ ಇ-ವಾಣಿಜ್ಯಕ್ಕೆ ಸಂಬಂಧಿಸಿದ ೬೭ ಸಾವಿರ ಪ್ರಕರಣಗಳಿದ್ದು, ಇವುಗಳ ವಿಲೇವಾರಿಯಲ್ಲಿ ೩೨ ಕೋಟಿ ರೂಪಾಯಿ ಮರುಪಾವತಿಸಲಾಗಿದೆ ಎಂದು ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವಾಲಯ ತಿಳಿಸಿದೆ.

ಸಚಿವಾಲಯದ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಯಿಂದಾಗಿ ಅನೇಕ ನಾಗರಿಕರು ದಾವೆಗಳ ಹಂತಕ್ಕೆ ಹೋಗದೆ, ಕುಂದು-ಕೊರತೆಗಳ ನಿವಾರಣೆ ಹಂತದಲ್ಲೇ ಪರಿಹಾರ ಪಡೆಯುವಂತಾಗಿದೆ. ಗ್ರಾಹಕರು ೧೯೧೫ ಟೋಲ್ ಮುಕ್ತ ನಂಬರ್‌ಗೆ ಕರೆ ಮಾಡಿ ೧೭ ಭಾಷೆಗಳಲ್ಲಿ ತಮ್ಮ ಕುಂದು-ಕೊರತೆಗಳನ್ನು ನೋಂದಾಯಿಸಬಹುದಾಗಿದೆ.

*******ಮುಕ್ತಾಯ*******